ಬೆಂಗಳೂರಿನ ತ್ಯಾಜ್ಯ ನೀರು ಪೂರಕವೋ? ಮಾರಕವೋ?' ಕಾರ್ಯಾಗಾರದಲ್ಲಿ ವಿಜ್ಞಾನಿ ರಾಮಚಂದ್ರ ಆತಂಕ

# ಜೀವ ವೈವಿಧ್ಯದ ಮೇಲೆ ಭಾರಿ ಅಪಾಯ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** 'ಬೆಂಗಳೂರಿನ ತ್ಯಾಜ್ಯ ನೀರಿನಲ್ಲಿ ಇರುವ ಹಾನಿಕಾರಕ ರಾಸಾಯನಿಕಗಳನ್ನು ಸಂಪೂರ್ಣ ತೆಗೆಯದೆ ಆ ನೀರನ್ನು ಕೆರೆಗಳಿಗೆ ಹರಿಸಿದರೆ ಅದರಿಂದ ಪರಿಸರ ಮತ್ತು ಜೀವವೈವಿಧ್ಯದ ಮೇಲೆ ಖಂಡಿತ ದುಷ್ಪರಿಣಾಮ ಉಂಟಾಗಲಿದೆ. ಈ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿಜ್ಞಾನಿ ಟಿ.ವಿ. ರಾಮಚಂದ್ರ ಹೇಳಿದರು.

ನಗರದಲ್ಲಿ ಮಂಗಳವಾರ ಶಾಶ್ವತ ನೀರಾವರಿ ಹೋರಾಟ ಸಮಿತಿ ಆಯೋಜಿಸಿದ್ದ, 'ಬಯಲು ಸೀಮೆಯತ್ತ ಬೆಂಗಳೂರಿನ ತ್ಯಾಜ್ಯ ನೀರು ಪೂರಕವೋ? ಮಾರಕವೋ?' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ನಮ್ಮ ತಂಡ ಬೆಂಗಳೂರಿನಲ್ಲಿರುವ ಬಹುಪಾಲು ಕೆರೆಗಳ ಅಧ್ಯಯನ ನಡೆಸಿದೆ. ಆ ಪೈಕಿ ಶೇ 98ರಷ್ಟು ಕೆರೆಗಳು ಅತಿಕ್ರಮಣಗೊಂಡಿವೆ. ಅವುಗಳಿಗೆ ಸಂಸ್ಕರಿಸದ ಚರಂಡಿ ನೀರು ಸೇರುತ್ತಿದೆ. ಪರಿಣಾಮ, ಕೆರೆಗಳು ಸೇರಿದಂತೆ ಸುತ್ತಲಿನ ಬಾವಿಗಳಲ್ಲಿ ಸಾರಜನಕ, ರಂಜಕ ಸೇರಿದಂತೆ ವಿವಿಧ ವಿಷಕಾರಿ ಭಾರಲೋಹ ಅಂಶ ಕಂಡುಬರುತ್ತಿದೆ' ಎಂದು ತಿಳಿಸಿದರು.

'ಇದರ ಬಗ್ಗೆ 2005 ರಿಂದ ಈವರೆಗೆ ನಾನು ಸುಮಾರು 250 ಹರಿತವಾದ ಲೇಖನಗಳನ್ನು ಬರೆದಿರುವೆ. ಆದರೆ ಅವುಗಳಿಂದ ನಮ್ಮ ಅಧಿಕಾರಿಗಳನ್ನು, ರಾಜಕಾರಣಿಗಳನ್ನು ಎಚ್ಚರಿಸಲು ಆಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ನೀರು ಪೂರೈಸುವ ಬೆಂಗಳೂರಿನ ಕೆರೆಗಳು 'ಡಿ' ಮತ್ತು 'ಇ' ಗುಂಪಿಗೆ ಸೇರಿವೆ. ಈ ಉಪ ಯೋಗವಿಲ್ಲದ ಕೆರೆಗಳಲ್ಲಿ ಭಾರತೀಯ ಮಾನಕ ಸಂಸ್ಥೆ (ಬಿಐಎಸ್), ವಿಶ್ವ ಆರೋಗ್ಯ ಸಂಸ್ಥೆ ಮಾನದಂಡ ಮೀರಿದ ರಾಸಾಯನಿಕ ಅಂಶವುಳ್ಳ ಬಹಳ ಅಪಾಯಕಾರಿ ನೀರಿದೆ. ಅದನ್ನು ಕೃಷಿಗೆ ಕೂಡ ಬಳಕೆ ಮಾಡಲು ಸಾಧ್ಯವಿಲ್ಲ. ಬಳಸಿದರೆ ಭೂಮಿ ಫಲವತ್ತತೆ ಹಾಳಾಗುತ್ತದೆ' ಎಂದರು.

'ಏತನೀರಾವರಿ ಯೋಜನೆಯ ವಿಸ್ತೃತ ಯೋಜನಾ ವರದಿಯಲ್ಲೇ (ಡಿಪಿಆರ್) ಉಲ್ಲೇಖಿಸಿರುವ ನೀರಿನ ಗುಣಮಟ್ಟ ಅವಲೋಕಿಸಿದರೆ ಅಪಾಯಕಾರಿ ಪ್ರಮಾಣದಲ್ಲಿದೆ. ಸರ್ಕಾರದ ಹೇಳಿದಷ್ಟು ಪ್ರಮಾಣದಲ್ಲಿ ಕೂಡ ಅಲ್ಲಿ ಸಂಸ್ಕರಣೆಯಾಗುತ್ತಿಲ್ಲ. ಹೇಳುವುದು ಒಂದು, ಮಾಡುವುದು ಮತ್ತೊಂದು ಆಗುತ್ತಿದೆ. ಪ್ರಜೆಗಳು ಎಲ್ಲಿಯವರೆಗೆ ಕೇಳುವುದಿಲ್ಲವೋ ಅಲ್ಲಿಯವರೆಗೆ ಅನಾಹುತಗಳು ಆಗುತ್ತಲೇ ಇರುತ್ತವೆ' ಎಂದು ತಿಳಿಸಿದರು.

'ಯಾರಾದರೂ ಈ ಜಿಲ್ಲೆಗಳಿಗೆ ಹರಿಸುವ ನೀರು ಸೂಕ್ತವಾಗಿದೆ ಎಂದು ಕುಡಿದು ತೋರಿಸಲಿ. ನನ್ನ ವರದಿ ವಾಪಸ್ ಪಡೆಯುತ್ತೇನೆ. ಈ ನೀರಿನಲ್ಲಿರುವ ಹಾನಿಕಾರಕ ಅಂಶಗಳನ್ನು ಸಂಪೂರ್ಣವಾಗಿ ತೆಗೆದು ಪೂರೈಸಿದರೆ ನಮ್ಮ ಅಭ್ಯಂತರವಿಲ್ಲ. ಅದಕ್ಕಾಗಿಯೇ ಸರ್ಕಾರಕ್ಕೆ ಸತತವಾಗಿ ಎಚ್ಚರಿಸುತ್ತಿದ್ದೇನೆ. ಆದರೆ ಅದು ಎಚ್ಚೆತ್ತುಕೊಳ್ಳುತ್ತಲೇ ಇಲ್ಲ' ಎಂದು ವಿಷಾದಿಸಿದರು.

'ಯಾವ ನಾಯಕನಿಗೆ ವಿಷನ್ (ದೂರದೃಷ್ಟಿ) ಇರುವುದಿಲ್ಲವೋ ಅವರ ಮಿಷನ್ (ಯೋಜನೆ) ಬೇರೆಯಾಗುತ್ತದೆ. ಮಿಷನ್‌ಗೆ ಉದ್ದೇಶ ದುಡ್ಡು ಮಾಡುವ ಉದ್ದೇಶವಿರುತ್ತದೆ. ವಿಷನ್‌ಗೆ ಜನಸಾಮಾನ್ಯರಿಗೆ ಒಳ್ಳೆಯದು ಮಾಡುವ ಸದುದ್ದೇಶವಿರುತ್ತದೆ. ಇದನ್ನು ಜನರು ಅರ್ಥಮಾಡಿಕೊಳ್ಳಬೇಕು' ಎಂದರು.

ಸಾವಯವ ಕೃಷಿ ತಜ್ಞ ಕೆ.ಆರ್. ಹುಲ್ಲುನಾಚೇಗೌಡ ಮಾತನಾಡಿ, 'ಇಂತಹ ಯೋಜನೆಗಳಲ್ಲಿ ಆರಂಭದಲ್ಲಿ ತಾತ್ಕಾಲಿಕವಾಗಿ ಎಲ್ಲವೂ ಚೆನ್ನಾಗಿರುತ್ತದೆ. ಫಲಿತಾಂಶ ಮಾತ್ರ ಸ್ವಲ್ಪ ವಿಳಂಬವಾಗಿ ಹೊರಗೆ ಬರುತ್ತದೆ. ಒಂದೊಮ್ಮೆ ಇಲ್ಲಿ ಈ ಕೊಳಚೆ ನೀರು ಹರಿಸಿದ್ದೆ ಆದರೆ ಮುಂದಿನ 10 ವರ್ಷಗಳಲ್ಲಿ ಈ ಭಾಗದಲ್ಲಿ ಅದರ ದುಷ್ಪರಿಣಾಮ ನೋಡಬೇಕಾಗುತ್ತದೆ. ಅದರ ಬದಲು ನಾವೆಲ್ಲರೂ ಈಗಲೇ ಎಚ್ಚೆತ್ತುಕೊಳ್ಳುವ ಅಗತ್ಯವಿದೆ' ಎಂದು ಹೇಳಿದರು.

ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್.ಆಂಜನೇಯರೆಡ್ಡಿ, ನೀರಾವರಿ ಸೇರಿದಂತೆ ವಿವಿಧ ಸಂಘಟನೆಗಳು ಹೋರಾಟಗಾರರು, ವಿವಿಧ ಪಕ್ಷಗಳ ಮುಖಂಡರು, ಸಾರ್ವಜನಿಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.



ಕಾರ್ಯಾಗಾರದಲ್ಲಿ ವಿಜ್ಞಾನಿ ಟಿ.ವಿ.ರಾಮಚಂದ್ರ ಮಾತನಾಡಿದರು

## ಕಿಡ್ನಿ ಎಲ್ಲಿಂದ ತರಬೇಕು?

'ಬೆಂಗಳೂರಿನ ಸುತ್ತಲಿನ ಹಳ್ಳಿಯಲ್ಲಿ ತ್ಯಾಜ್ಯ ನೀರಿನಲ್ಲಿ ಬೆಳೆದ ತರಕಾರಿ, ಸೊಪ್ಪುಗಳಲ್ಲಿ ಕೂಡ ವಿಷಕಾರಿ ಅಂಶಗಳಿರುವುದು ನಮ್ಮ ಅಧ್ಯಯನದಲ್ಲಿ ಪತ್ತೆಯಾಗಿದೆ. ಅಂತಹ ನೀರಿನಲ್ಲಿ ಬೆಳೆದ ತರಕಾರಿ, ಮೀನುಗಳನ್ನು ತಿಂದರೆ ಕಿಡ್ನಿ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಸಂವಿಧಾನದ 21ನೇ ವಿಧಿ ಎಲ್ಲ ನಾಗರಿಕರಿಗೂ ಶುದ್ಧವಾದ ಗಾಳಿ, ನೀರು ನೀಡುವುದು ಸರ್ಕಾರದ ಹಕ್ಕು ಎನ್ನುತ್ತದೆ. ಕಲುಷಿತ ನೀರು ಕೊಟ್ಟರೆ ಆ ಹಕ್ಕಿಗೆ ಚ್ಯುತಿಯಾಗುತ್ತದೆ. ಹೀಗಾಗಿ ನಾವು ಈ ಅಧಿಕಾರ ನಿಮಗೆ ಯಾರು ಕೊಟ್ಟವರು ಎಂದು ಪ್ರಶ್ನಿಸಬೇಕಿದೆ' ಎಂದು ವಿಜ್ಞಾನಿ ಟಿ.ವಿ.ರಾಮಚಂದ್ರ ಎಂದು ತಿಳಿಸಿದರು.

'ಬೆಂಗಳೂರಿನಲ್ಲಿ ನಾವು ಚಿಕ್ಕವರಿದ್ದಾಗ ಒಂದು ಲಕ್ಷ ಜನರಲ್ಲಿ ಒಬ್ಬರಿಗೆ ಕಿಡ್ನಿ ಕಾಯಿಲೆ ಇತ್ತು. ಇವತ್ತು ಐದು ಸಾವಿರ ಜನರಲ್ಲಿ ಒಬ್ಬರಂತೆ ಕಾಣಿಸಿಕೊಂಡಿದೆ. ಐದಾರು ವರ್ಷಗಳಲ್ಲಿ ಪ್ರತಿ ಮನೆಯವರು ಡಯಾಲಿಸಿಸ್ ಸೇವೆ ಪಡೆಯುವ ಕಾಲ ಬಂದರೂ ಆಶ್ಚರ್ಯ ಪಡಬೇಕಿಲ್ಲ. ಇದು ಆತಂಕಕಾರಿ ಅಂಶ. ಶ್ರೀಮಂತರು ಬೇರೆಯವರಿಂದ ಕಿಡ್ನಿ ದಾನ ಪಡೆದು ಬದುಕುತ್ತಾರೆ. ಹೊತ್ತಿನ ಊಟಕ್ಕೂ ಪರದಾಡುವ ಜನಸಾಮಾನ್ಯರು, ರೈತರು ಎಲ್ಲಿಂದ ಕಿಡ್ನಿ ತರಲು ಸಾಧ್ಯ. ಅದಕ್ಕೆ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ' ಎಂದು ಒತ್ತಿ ಹೇಳಿದರು.

## ನೀರಿಗೇ ಬೆಂಕಿಯಿಟ್ಟ ಮೂರ್ಖರು

'ನಮ್ಮ ಕೆರೆಗಳಲ್ಲಿ ನೊರೆಯಲ್ಲ ಬೆಂಕಿಯೂ ಕಾಣಿಸುತ್ತದೆ. ನೀರು ಮತ್ತು ಬೆಂಕಿಯನ್ನು ಒಟ್ಟಿಗೆ ತೋರಿಸುವ ಸಾಮರ್ಥ್ಯ ನಮಗಿದೆ. ಇಂತಹ ಸಾಮರ್ಥ್ಯ ಯಾವ ದೇಶದವರಿಗೂ ಇಲ್ಲ. ಇದು ನಾವು ಎಷ್ಟು ಮೂರ್ಖರು ಎನ್ನುವುದು ತೋರಿಸುತ್ತದೆ. ಉಪ ಲೋಕಾಯುಕ್ತ ಸುಭಾಷ್ ಅಡಿ ಅವರು ಕೆರೆಗಳ ಸ್ಥಿತಿಗತಿ ಬಗ್ಗೆ ನಮಗೆ ವರದಿ ನೀಡುವಂತೆ ಕೋರಿದರು. ಆದರೆ ಅವರ ಒಳ್ಳೆಯ ಧ್ಯೇಯ ಸರ್ಕಾರದವರಿಗೆ ಹಿಡಿಸಲಿಲ್ಲ. ಅಡಿ ಅವರು ಕೂಡ ಮೌನವಾದರು. ಕೆಲವರಿಗೆ ಮಾಲಿನ್ಯ ಜಾಸ್ತಿಯಾದಷ್ಟು ಹೆಚ್ಚು ಲಾಭವಾಗುತ್ತದೆ'.

ಐದು ವರ್ಷಗಳ ತಮ್ಮ ಅಧಿಕಾರಕ್ಕಾಗಿ ನಿಮ್ಮ ಆರೋಗ್ಯ ಹಾಳು ಮಾಡುವ ಅಧಿಕಾರ ಯಾವ ಜನಪ್ರತಿನಿಧಿಗೂ ಇಲ್ಲ. ಹೀಗಾಗಿ ಜನರು ಎಚ್ಚೆತ್ತುಕೊಳ್ಳಬೇಕಾಗಿದೆ **ಟಿ.ವಿ. ರಾಮಚಂದ್ರ ಐಐಎಸ್‌ಸಿ ವಿಜ್ಞಾನಿ**

**ಮುಖ್ಯಾಂಶಗಳು**

- ಸರ್ಕಾರದ ಧೋರಣೆಗೆ ಅಸಮಾಧಾನ
- ಸಂಪೂರ್ಣ ಶುದ್ಧೀಕರಿಸಿಯೇ ನೀರು ಪೂರೈಸುವಂತೆ ಒತ್ತಾಯ
- ಜನರ ಆರೋಗ್ಯದ ಬಗ್ಗೆ ಆತಂಕ ವ್ಯಕ್ತ

## ವಿಜ್ಞಾನಿ ರಾಮಚಂದ್ರ ಉವಾಚ

### ಮೂರನೇ ಹಂತದ ಶುದ್ಧೀಕರಣ ಕಷ್ಟ

'ನೀರು ಪೂರೈಸಲು ಉದ್ದೇಶಿಸಿರುವ ಕೆರೆಗಳಲ್ಲಿರುವ ಸಂಸ್ಕರಣೆ ಘಟಕದಲ್ಲಿ ಸಂಗ್ರಹಿಸಿದ ನೀರನ್ನು ವಿಶ್ಲೇಷಿಸಿ ನೋಡಿದರೆ ಅದರಲ್ಲಿ ಕೂಡ ರಂಜಕ, ಸಾರಜನಿಕ, ಭಾರಲೋಹದ ಅಂಶಗಳು ಇರುವುದು ಪತ್ತೆಯಾಗಿದೆ. ಇವುಗಳನ್ನು ತೆಗೆಯಬೇಕಾದರೆ ಮೂರನೇ ಹಂತದ ಶುದ್ಧೀಕರಣವಾಗಲೇ ಬೇಕು. ಆದರೆ ಅದನ್ನು ನಮ್ಮಲ್ಲಿ ಮಾಡಲು ಯಾವುದೇ ಸ್ಥಳೀಯ ಸಂಸ್ಥೆಯಿಂದ ಸಾಧ್ಯವಿಲ್ಲ. ಜೌಗು ಪ್ರದೇಶ ಮತ್ತು ಪಾಚಿ ಹೊಂಡದಲ್ಲಿ ಶುದ್ಧೀಕರಿಸಿದರೆ ಮಾತ್ರ ಈ ಅಂಶಗಳನ್ನು ತೆಗೆಯಬಹುದು'.

### ಯೋಜನೆಯೇ ದೊಡ್ಡ ಭ್ರಮೆ

'ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆಗಳಲ್ಲಿ ಬೀಳುವ ಮಳೆಯಿಂದಲೇ 115 ಟಿಎಂಸಿ ಅಡಿ ನೀರು ಸಂಗ್ರಹಿಸಬಹುದು. ಈ ಎರಡು ಜಿಲ್ಲೆಗಳ ಜನರಿಗೆ ಕುಡಿಯಲು ಮತ್ತು ವ್ಯವಸಾಯದ ಬಳಕೆಗೆ 66 ಟಿಎಂಸಿ ಅಡಿ ನೀರು ಸಾಕು. ಆದರೆ ಏತನೀರಾವರಿ ಯೋಜನೆಯಡಿ ಎರಡು ಜಿಲ್ಲೆಗಳಿಗೂ ಸೇರಿ ಐದು ಟಿಎಂಸಿ ನೀರು ಬರಬಹುದು ಎಂದು ಹೇಳುತ್ತಿದ್ದಾರೆ. ಇದು ಏತಕ್ಕೆ ಸಾಕಾಗುತ್ತದೆ? ವರುಣ ದೇವ ಕೊಡುವ ನೀರು ಹಿಡಿದಿಡಲಾಗದೆ. ಬೇರೆ ಪ್ರದೇಶದ ಚರಂಡಿ ನೀರು ಬಳಸುತ್ತೇವೆ ಎಂದರೆ ಇದೊಂದು ಭ್ರಮೆಯ ಯೋಜನೆ'.

### ವಿಜ್ಞಾನಿಗೆ ವಿಶ್ವವೇ ಮನೆ

'ಒಬ್ಬ ವಿಜ್ಞಾನಿಯಾಗಿ ಸರ್ಕಾರ ಮತ್ತು ಜನರನ್ನು ಎಚ್ಚರಿಸುವುದು ನಮ್ಮ ಕರ್ತವ್ಯ. ಅದನ್ನು ಮಾಡದಿದ್ದರೆ ನಾವು ವಿಜ್ಞಾನಿಗಳಾಗಿ ಇರಲು ಅರ್ಹರಲ್ಲ. ವಿಜ್ಞಾನಿಗೆ ಇಡೀ ವಿಶ್ವವೇ ಮನೆ. ಎಲ್ಲಿಯೇ ತೊಂದರೆಯಾದರೂ ಎಚ್ಚರಿಸುವುದು ನಮ್ಮ ಜವಾಬ್ದಾರಿ ಅದನ್ನು ನಾವು ಮಾಡುತ್ತಿದ್ದೇವೆ. ಕೆಲ ದೇಶಗಳಲ್ಲಿ ವಿಜ್ಞಾನಿಗಳೇ ಮಂತ್ರಿಗಳಾಗಿರುತ್ತಾರೆ. ಆದರೆ ನಮ್ಮಲ್ಲಿ ಶಾಲೆ ಮುಖ ನೋಡದವರು ಕೂಡ ಮಂತ್ರಿಗಳು. ಅವರಿಗೆ ಎಲ್ಲವೂ ಗೊತ್ತು. ಹೀಗಾಗಿಯೇ ಅವರು ನೀರು ಕಲುಷಿತವಾಗಿದ್ದರೂ ಈ ನೀರು ಪರಿಶುದ್ಧವಾಗಿದೆ. ಇದರಿಂದ ಯಾವುದೇ ಹಾನಿ ಇಲ್ಲ ಎಂದು ಹೇಳಿಕೆಗಳನ್ನು ನೀಡುತ್ತಲೇ ಇರುತ್ತಾರೆ'.

# 'ಶಾಸಕರ ವಿರುದ್ಧ ಸುಳ್ಳು ಆರೋಪ'

**ಚಿಕ್ಕಬಳ್ಳಾಪುರ:** 'ಮತ್ತೊಮ್ಮೆ ಶಾಸಕರಾಗುವ ಹಗಲುಗನಸು ಕಾಣುತ್ತಿರುವ ಮಾಜಿ ಶಾಸಕ ಕೆ.ಪಿ.ಬಚ್ಚೇಗೌಡ ಅವರು ಶಾಸಕ ಸುಧಾಕರ್ ಅವರ ವಿರುದ್ಧ ಪ್ರಜ್ಞಾಹೀನರಂತಾಗಿ, ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದು ಕೆಪಿಸಿಸಿ ಸದಸ್ಯ ಎಸ್.ಪಿ. ಶ್ರೀನಿವಾಸ್ ಟೀಕಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಚ್ಚೇಗೌಡರು ತಮ್ಮ ಜವಾಬ್ದಾರಿ ಅರಿತುಕೊಂಡು ಶಾಸಕರ ವಿರುದ್ಧ ಸಲ್ಲದ ಆರೋಪ ಮಾಡುವುದು ಬಿಡಬೇಕು. ಅಧಿಕಾರದಲ್ಲಿದ್ದಾಗ ನಿದ್ದೆ ಮಾಡಿದವರು ಈಗ ಎದ್ದು ನಾನೇ ಮುಂದಿನ ಶಾಸಕ ಎಂದು ಹಗಲು ಕನಸು ಕಾಣುತ್ತಿದ್ದಾರೆ. ಅದು ಎಂದಿಗೂ ನನಸಾಗುವುದಿಲ್ಲ' ಎಂದು ಹೇಳಿದರು.

'ನನ್ನ ಅವಧಿಯಲ್ಲಿ ತಂದ ಯೋಜನೆಗಳನ್ನೇ ಸುಧಾಕರ್ ಅವರು ಉದ್ಘಾಟಿಸುತ್ತಿದ್ದಾರೆ ಎಂದು ಬಚ್ಚೇಗೌಡರು ಸುಳ್ಳು ಹೇಳುತ್ತಲೇ ಇದ್ದಾರೆ. ಶಾಸಕರಿಗೆ ಆ ರೀತಿ ಪ್ರಚಾರ ಪಡೆಯುವ ದುರ್ದೈವ ಬಂದಿಲ್ಲ. ಬರುವುದೂ ಇಲ್ಲ ಎಂದರು.

ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಮುಖಂಡ ರಿಯಾಜ್ ಮಾತನಾಡಿ, 'ಜೆಡಿಎಸ್‌ಗೆ ಪಕ್ಷಕ್ಕೆ ಕಾರ್ಯಕರ್ತರ ಕೊರತೆ ಎದುರಾಗಿದೆ. ಆದ್ದರಿಂದ ತಮ್ಮ ಪಕ್ಷದಲ್ಲೇ ಇದ್ದವರನ್ನು ಮತ್ತೆ ಹೂ ಮಾಲೆ ಹಾಕಿ ಸೇರ್ಪಡೆ ಮಾಡಿಕೊಳ್ಳುವ ನಾಟಕವಾಡಿದ್ದಾರೆ ಎಂದು ಹೇಳಿದರು.

ತಾಲ್ಲೂಕು ಪಂಚಾಯಿತಿ ಸದಸ್ಯ ತಿರುಮಳಪ್ಪ, ಮುಖಂಡರಾದ ಖಲಂದರ್ ಪಾಷಾ, ಖಾದರ್ ಬಾಷಾ, ಮುಬಾಸಿರ್, ಖಲೀಂ, ಕೃಷ್ಣಮೂರ್ತಿ ಹಾಜರಿದ್ದರು.

ಪಶುಪಾಲನಾ ಇಲಾಖೆ ಉಪ ನಿರ್ದೇಶಕ ಚನ್ನಕೇಶವಯ್ಯ ಅನಿಸಿಕೆ

# ಹಕ್ಕಿ ಜ್ವರ ಭೀತಿ: ಕಟ್ಟೆಚ್ಚರಕ್ಕೆ ಆದ್ಯತೆ

ಪ್ರಜಾವಾಣಿ ವಾರ್ತೆ

**ಕೋಲಾರ:** 'ರಾಜ್ಯದ ರಾಜಧಾನಿ ಬೆಂಗಳೂರಿನ ಕೆಲ ಫಾರಂಗಳಲ್ಲಿ ಕೋಳಿಗಳಿಗೆ ಹಕ್ಕಿ ಜ್ವರದ ಸೋಂಕು ಕಾಣಿಸಿಕೊಂಡಿದ್ದು, ಜಿಲ್ಲೆಯಲ್ಲಿ ಕಟ್ಟೆಚ್ಚರ ವಹಿಸಬೇಕು' ಎಂದು ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಎಸ್.ಚನ್ನಕೇಶವಯ್ಯ ಸಿಬ್ಬಂದಿಗೆ ಸೂಚನೆ ನೀಡಿದರು.

ಹಕ್ಕಿ ಜ್ವರ ಭೀತಿ ಹಿನ್ನೆಲೆಯಲ್ಲಿ ನಗರದಲ್ಲಿ ಮಂಗಳವಾರ ನಡೆದ ಆರೋಗ್ಯ ಹಾಗೂ ಪಶು ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ, ಹಕ್ಕಿ ಜ್ವರದ ಬಗ್ಗೆ ಸಾರ್ವಜನಿಕರು ಆತಂಕಗೊಂಡಿದ್ದಾರೆ. ಹೀಗಾಗಿ ಜನರಿಗೆ ಅರಿವು ಮೂಡಿಸುವ ಅಗತ್ಯವಿದೆ ಎಂದು ತಿಳಿಸಿದರು.

ಹಕ್ಕಿ ಜ್ವರವು ಕೆಲ ನಿರ್ದಿಷ್ಟ ಪಕ್ಷಿಗಳಿಂದ ಮನುಷ್ಯರಿಗೆ ಹರಡುವ ಕಾಯಿಲೆಯಾಗಿದೆ. ಜಿಲ್ಲೆಯ ಪಶು ವೈದ್ಯಾಧಿಕಾರಿಗಳು ಎಲ್ಲಾ ಕೋಳಿ ಫಾರಂಗಳಿಗೆ ಭೇಟಿ ನೀಡಿ ಕಾಯಿಲೆ ಬಗ್ಗೆ ತೀವ್ರ ನಿಗಾ ವಹಿಸುವಂತೆ ಫಾರಂಗಳ ಮಾಲೀಕರು ಮತ್ತು ಕೆಲಸಗಾರರಿಗೆ ಸೂಚನೆ ನೀಡಬೇಕು ಎಂದು ಹೇಳಿದರು.

ತಾಲ್ಲೂಕು ವ್ಯಾಪ್ತಿಯ ಕೋಳಿ ಫಾರಂ ಮತ್ತು ಗ್ರಾಮಗಳಲ್ಲಿ ಹೆಚ್ಚಾಗಿ ಕೋಳಿಗಳ ಸಾವು ಕಂಡುಬಂದಲ್ಲಿ ಕೂಡಲೇ ಮಾಹಿತಿ ನೀಡಬೇಕು. ಸೋಂಕಿನ ಬಗ್ಗೆ ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಬೇಕು. ಕೋಳಿ ಫಾರಂಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳಿಗೆ ಹಕ್ಕಿ ಜ್ವರದ ಸೋಂಕು ತಗುಲುವ ಸಾಧ್ಯತೆ ಹೆಚ್ಚು. ಹೀಗಾಗಿ ಫಾರಂಗಳಲ್ಲಿ ಕೆಲಸ ಮಾಡುವ ವೇಳೆ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ಕೆಲಸಗಾರರಿಗೆ ಅರಿವು ಮೂಡಿಸಬೇಕು. ಕಡ್ಡಾಯವಾಗಿ ಮುಖಗವುಸು ಮತ್ತು ಕೈಗಳಿಗೆ ಗ್ಲೌಸ್ ಧರಿಸುವಂತೆ ತಿಳಿಸಬೇಕು ಎಂದರು.

**ಆರ್‌ಆರ್‌ಟಿ ರಚನೆ:** ಕುಕ್ಕುಟ ಉದ್ಯಮದ ಹಿತದೃಷ್ಟಿಯಿಂದ ಜಿಲ್ಲೆಯ ಪ್ರತಿ 5 ಹಳ್ಳಿಗೆ ಒಂದು ಕ್ಲಸ್ಟರ್ ಮಾಡಿ 46 ಕ್ಷಿಪ್ರ ಕಾರ್ಯಪಡೆ (ಆರ್‌ಆರ್‌ಟಿ) ತಂಡಗಳನ್ನು ರಚಿಸಲಾಗಿದೆ. ಪ್ರತಿ ಆರ್‌ಆರ್‌ಟಿ ತಂಡದಲ್ಲಿ ಪಶು ವೈದ್ಯ, ಇಬ್ಬರು ಅರೆ ತಾಂತ್ರಿಕ ಸಿಬ್ಬಂದಿ ಮತ್ತು ಒಬ್ಬರು ಡಿ ದರ್ಜೆ ನೌಕರರಿದ್ದಾರೆ. ಆರ್‌ಆರ್‌ಟಿ ತಂಡದ ಸದಸ್ಯರು ತಮ್ಮ ಕಾರ್ಯ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೋಳಿ ಫಾರಂಗಳಿಗೆ ನಿಯಮಿತವಾಗಿ ಭೇಟಿ ಕೊಟ್ಟು ಹಕ್ಕಿ ಜ್ವರದ ಲಕ್ಷಣಗಳ ವಿವರವನ್ನು ಒಳಗೊಂಡ ಕರಪತ್ರಗಳನ್ನು ವಿತರಿಸಬೇಕು ಎಂದು ಸೂಚಿಸಿದರು.

**ಔಷಧ ದಾಸ್ತಾನು:** 'ಜಿಲ್ಲೆಯಲ್ಲಿ ಸದ್ಯಕ್ಕೆ ಹಕ್ಕಿ ಜ್ವರ ಕಂಡುಬಂದಿಲ್ಲ. ಈ ಬಗ್ಗೆ ಸಾರ್ವಜನಿಕರು ಆತಂಕ ಪಡುವ ಅವಶ್ಯಕತೆಯಿಲ್ಲ. ಈಯಿಲೆಗೆ ಬೇಕಿರುವ ಔಷಧಗಳ ದಾಸ್ತಾನು ಇದೆ' ಎಂದು ಆರೋಗ್ಯ ಇಲಾಖೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ವಿಜಯ ಕುಮಾರಿ ಮಾಹಿತಿ ನೀಡಿದರು.

ಜಿಲ್ಲಾ ಕೋಳಿ ಸಾಕಾಣಿಕೆ ಮತ್ತು ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಟಿ.ಜಯರಾಂ, ಪಶು ವೈದ್ಯಾಧಿಕಾರಿಗಳಾದ ಡಾ. ಆಂಜನೇಯರೆಡ್ಡಿ, ಡಾ. ಜಗದೀಶ್ ಕುಮಾರ್, ಡಾ.ಕಾರ್ತಿಕ್ ಹಾಜರಿದ್ದರು.



ಪಶುಪಾಲನಾ ಮತ್ತು ಪಶು ವೈದ್ಯ ಸೇವಾ ಇಲಾಖೆ ಉಪ ನಿರ್ದೇಶಕ ಡಾ.ಎಸ್.ಚನ್ನಕೇಶವಯ್ಯ ಹಕ್ಕಿ ಜ್ವರ ಭೀತಿ ಕಾರಣ ಇಲಾಖೆ ಸಿಬ್ಬಂದಿಯ ಸಭೆ ನಡೆಸಿದರು

ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಹಕ್ಕಿ ಜ್ವರ ಕಾಣಿಸಿಕೊಂಡಿದ್ದು, ಅಲ್ಲಿಂದ ಕೋಳಿ ಮತ್ತು ಕೋಳಿ ಮೊಟ್ಟೆಗಳ ಆಮದನ್ನು ನಿರ್ಬಂಧಿಸಬೇಕು **ಡಾ.ವಿಜಯಕುಮಾರಿ** ಜಿಲ್ಲಾ ಸರ್ವೇಕ್ಷಣಾಧಿಕಾರಿ

**ಮುಖ್ಯಾಂಶಗಳು**

- ಬೆಂಗಳೂರಿನ ಫಾರಂಗಳಲ್ಲಿ ಸೋಂಕು
- ಸಾರ್ವಜನಿಕರು ಮೂಡಿದ ಆತಂಕ
- ಸುರಕ್ಷತಾ ಕ್ರಮಗಳ ಅರಿವು ಮೂಡಿಸಿ

# 'ಸೌಹಾರ್ದ ಕರ್ನಾಟಕಕ್ಕಾಗಿ ಮಾನವ ಸರಪಳಿ

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** 'ಶಾಂತಿ ಸೌಹಾರ್ದ ಬಿತ್ತಲು 'ಸೌಹಾರ್ದಕ್ಕಾಗಿ ಕರ್ನಾಟಕ' ಎಂಬ ಆಶಯದೊಂದಿಗೆ ಜನವರಿ 30 ರಂದು ಬಸವ ಕಲ್ಯಾಣದಿಂದ ಚಾಮರಾಜನಗರದವರೆಗೂ ಮಾನವ ಸರಪಳಿ ರಚಿಸಲಾಗುವುದು' ಎಂದು ಸಿಪಿಎಂ ರಾಜ್ಯ ಘಟಕದ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಳೆದ ನಾಲ್ಕು ವರ್ಷದಲ್ಲಿ ರಾಜ್ಯದಲ್ಲಿ ದಿನೇ ದಿನೇ ಕೋಮುಗಲಭೆಗಳು ಹೆಚ್ಚಾಗುತ್ತಿವೆ. ಅದರಲ್ಲೂ ಚುನಾವಣೆ ಸಮೀಸುತ್ತಿದ್ದಂತೆ ಕೆಲ ಬಿಜೆಪಿ ನಾಯಕರು ರಾಜಕೀಯ ಪಿತೂರಿಗೆ ರಾಜ್ಯದಲ್ಲಿ ಕೋಮುವಾದಿ ಗಲಭೆಗಳನ್ನು ಸೃಷ್ಟಿಸುವಲ್ಲಿ, ಪ್ರಚೋದಿಸುವಲ್ಲಿ ನಿರತರಾಗಿದ್ದಾರೆ' ಎಂದು ಆರೋಪಿಸಿದರು.

'ಶಾಂತಿ ಸಾಮರಸ್ಯಕ್ಕೆ ಹೆಸರಾಗಿರುವ ಕರ್ನಾಟಕದಲ್ಲಿ ಇಂದು ಕೋಮುಗಲಭೆ, ಹಿಂಸಾಚಾರ ಮಿತಿ ಮೀರಿದೆ. ಇವುಗಳಲ್ಲಿ ಹೆಚ್ಚಿನ ಘಟನೆಗಳು, ಯೋಜಿತ ಮತ್ತು ಉದ್ದೇಶ ಪೂರ್ವಕವಾಗಿರುವಂತೆ ಕಾಣುತ್ತಿವೆ. ಪ್ರಚೋದನಕಾರಿ ಮಾತುಗಳು ಆತಂಕ ಹುಟ್ಟಿಸುತ್ತಿವೆ. ಚುನಾವಣೆ ಹತ್ತಿರವಾಗುತ್ತಿರುವ ಸಮಯದಲ್ಲಿ ಕಾಣಿಸುತ್ತಿರುವ ಈ ವಿದ್ಯಮಾನ ಜನರನ್ನು ಮತ್ತಷ್ಟು ಭಯಕ್ಕೆ ನೂಕಿದೆ' ಎಂದರು.

'ಕರಾವಳಿ ಭಾಗದಲ್ಲಿ ಕೋಮುವಾದಿ ಶಕ್ತಿಗಳು ಹೆಚ್ಚಾಗುತ್ತಿವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಾಗಲಿವೆ ಎಂಬ ಆತಂಕದಿಂದ ಇಂತಹದೊಂದು ಸೌಹಾರ್ದ ಕೆಲಸಕ್ಕೆ ಮುಂದಾಗಿದ್ದೇವೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೋಮುವಾದಿಗಳನ್ನು ಮಟ್ಟ ಹಾಕಲು ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಹೇಳಿದರು.

'ಈ ನಿಟ್ಟಿನಲ್ಲಿ ರಾಜ್ಯದಾದ್ಯಂತ ಸಾಮರಸ್ಯ ಸಂದೇಶ ಬಿತ್ತಲು ಪ್ರಗತಿಪರ ಸಂಘಟನೆಗಳು, ವೇದಿಕೆಗಳನ್ನು ಒಟ್ಟು ಗೂಡಿಸಿ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಮಾನವ ಸರಪಳಿ ನಿರ್ಮಿಸಲಾಗುವುದು. ಯಾವುದೇ ಪಕ್ಷ ಭೇದವಿಲ್ಲದೆ ಅನೇಕ ಬರಹಗಾರರು, ಚಿಂತಕರು, ಮಹಿಳೆಯರು, ವಿದ್ಯಾರ್ಥಿಗಳು, ಯುವಕರು ರಾಜ್ಯದಲ್ಲಿ ಶಾಂತಿ ಸೌಹಾರ್ದ ಬಿತ್ತಲು ಈ ಕಾರ್ಯಕ್ರಮದಲ್ಲಿ ಪ್ರತಿಜ್ಞೆ ಮಾಡಲಿದ್ದಾರೆ' ಎಂದು ತಿಳಿಸಿದರು.

'ಕೋರೆಂಗಾವ್‌ನಲ್ಲಿ ದಲಿತರ ಮೇಲೆ ಆರ್‌ಎಸ್‌ಎಸ್ ದಾಳಿ ನಡೆಸಿದ್ದನ್ನು ಸಿಪಿಎಂ ಖಂಡಿಸುತ್ತದೆ. ಬಯಲುಸೀಮೆ ಭಾಗಕ್ಕೆ ಶಾಶ್ವತ ನೀರಾವರಿ ಒದಗಿಸಬೇಕು. ದಲಿತರು, ಮಹಿಳೆಯರು ಮೇಲಿನ ದೌರ್ಜನ್ಯ ನಿಲ್ಲಬೇಕು. ಬೆಂಗಳೂರು ತ್ಯಾಜ್ಯದ ನೀರನ್ನು ಬಯಲುಸೀಮೆ ಕೆರೆಗಳಿಗೆ ಹರಿಸುವುದು ನಿಲ್ಲಿಸಬೇಕು' ಎಂದು ಒತ್ತಾಯಿಸಿದರು.

'ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಬಿಜೆಪಿ, ಆರ್‌ಎಸ್‌ಎಸ್‌ಗೆ ನೆಲೆ ಇಲ್ಲ. ಇತ್ತೀಚೆಗೆ ಚಿಕ್ಕಬಳ್ಳಾಪುರದಲ್ಲಿ ಆಯೋಜಿಸಿದ್ದ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಹೊರಗಿನವರು ಭಾಗವಹಿಸಿದ್ದಾರೆ. ಜಿಲ್ಲೆಯಲ್ಲಿ ಆರ್‌ಎಸ್ ಎಸ್‌ನವರು ನೆಲೆ ಊರಲು ಸಿಪಿಎಂ ಪಕ್ಷ ಬಿಡುವುದಿಲ್ಲ. ಮುಂಬರುವ ಚುನಾವಣೆಯಲ್ಲಿ ರಾಜ್ಯದ 38 ಕ್ಷೇತ್ರ ಗಳಲ್ಲಿ ಸಿಪಿಎಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಉಳಿದ ಕ್ಷೇತ್ರದಲ್ಲಿ ಪಕ್ಷದ ನಿಲುವು ಆಧಾರದ ಮೇಲೆ ಮತ ಚಲಾಯಿಸಲಾಗುವುದು' ಎಂದು ಹೇಳಿದರು.

ಸಿಪಿಎಂ ಜಿಲ್ಲಾ ಘಟಕದ ಕಾರ್ಯದರ್ಶಿ ಜಯರಾಮರೆಡ್ಡಿ, ಸದಸ್ಯರಾದ ಚನ್ನರಾಯಪ್ಪ, ರಮಣ , ಬಿ.ಎನ್ ಮುನಿಕೃಷ್ಣಪ್ಪ, ಶ್ರೀರಾಮಪ್ಪ, ಲಕ್ಷ್ಮೀದೇವಮ್ಮ ಇದ್ದರು.

# ವ್ಯಕ್ತಿ ಸಾವು

**ಕೆಜಿಎಫ್:** ವಿಷ ಸೇವಿಸಿದ್ದ ಅನಾಮಧೇಯ ವ್ಯಕ್ತಿ ಇತ್ತೀಚೆಗೆ ರಾಬರ್ಟಸನ್ ಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ವಾರದ ಹಿಂದೆ ಬಟುವಾರಹಳ್ಳಿ ಬಳಿಯ ರಸ್ತೆ ಪಕ್ಕದಲ್ಲಿ ವಿಷ ಕುಡಿದು ನಿತ್ರಾಣವಾಗಿ ಬಿದ್ದಿದ್ದರು.

**ಕ್ಷೇಮ ಕುಶಲ ಓದಿರಿ**

# ವಿವೇಕಾನಂದರ ತತ್ವ ಪಾಲಿಸಿ

ಪ್ರಜಾವಾಣಿ ವಾರ್ತೆ

**ಶಿಡ್ಲಘಟ್ಟ:** ದರಿದ್ರ ನಾರಾಯಣನ ಸೇವೆಯಲ್ಲಿ ದೇವರ ಅಸ್ತಿತ್ವವಿದೆ ಎಂಬ ಸ್ವಾಮಿ ವಿವೇಕಾನಂದರ ತತ್ತ್ವದಂತೆ ಬಡ ಜನರ ಸೇವೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು ಎಂದು ರಾಮಕೃಷ್ಣಾಶ್ರಮದ ಪೂರ್ಣಾನಂದ ಸ್ವಾಮೀಜಿ ತಿಳಿಸಿದರು.

ತಾಲ್ಲೂಕಿನ ಮಳ್ಳೂರು ಗ್ರಾಮ ದಲ್ಲಿ ನೂತನವಾಗಿ ನಿರ್ಮಿಸಲು ಉದ್ದೇಶಿಸಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದ ನಿವೇಶನದ ಆವರಣದಲ್ಲಿ ಸೋಮವಾರ ಸ್ವಾಮಿ ವಿವೇಕಾನಂದರ 155ನೇ ಜಯಂತ್ಯುತ್ಸವದ ಆಚರಣೆಯಲ್ಲಿ ಅವರು ಆಶೀರ್ವಚನ ನೀಡಿದರು. ಸ್ವಾಮಿ ವಿವೇಕಾನಂದರು ತಮ್ಮ ವ್ಯಕ್ತಿತ್ವ, ವಿಚಾರಧಾರೆ ಮೂಲಕ ಸ್ವತಂತ್ರ ನವ ಭಾರತ ನಿರ್ಮಾಣಕ್ಕೆ ಬುನಾದಿಯನ್ನು ಹಾಕಿದರು ಎಂದು ಹೇಳಿದರು.

ದೇಶವನ್ನು ಮುನ್ನಡೆಸಲು ಸಶಕ್ತವಾದ ಯುವಪಡೆ ನಿರ್ಮಿಸುವುದೇ ಗುರಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಮಾನಸಿಕ, ದೈಹಿಕ, ಆಧ್ಯಾತ್ಮಿಕ, ನೈತಿಕ, ಸಾಮಾಜಿಕವಾಗಿ ಯುವಕರು ಎಂದೂ ಶಕ್ತಿ ಕಳೆದುಕೊಳ್ಳಬಾರದು ಎಂದು ತಿಳಿಸಿದ್ದರು. ವಿವೇಕವಾಣಿಯ ಒಂದಿಷ್ಟು ಅಂಶವನ್ನು ಇಂದಿನ ಯುವ ಪೀಳಿಗೆಗೆ ಅರ್ಥವಾದರೆ ಭಾರತೀಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಳ್ಳೂರು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಿಂದ ವಿದ್ಯಾರ್ಥಿಗಳು ಪ್ರಮುಖ ಬೀದಿಗಳಲ್ಲಿ ವಿವೇಕಾ ನಂದರ ಭಾವಚಿತ್ರದ ಮೆರವಣಿಗೆ ನಡೆಸಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಅಧ್ಯಕ್ಷ ರಾಮಾಂಜಿನಪ್ಪ, ಪ್ರಾಂಶುಪಾಲ ಚಂದ್ರಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಾಧಾ ಶಿವಕುಮಾರ್, ಪ್ರೌಢಶಾಲೆ ಮುಖ್ಯಶಿಕ್ಷಕ ನರಸಿಂಹಮೂರ್ತಿ, ಮಳ್ಳೂರು ಹರೀಶ್, ಆನೂರು ದೇವರಾಜ್, ನಂಜೇಗೌಡ ಹಾಜರಿದ್ದರು.



ಸ್ವಾಮಿ ವಿವೇಕಾನಂದರ ಭಾವಚಿತ್ರದಮೆರವಣಿಗೆ ನಡೆಯಿತು

# ಸಾವಿನಲ್ಲೂ ಒಂದಾದ ತಾಯಿ- ಮಗ

**ಕೆಜಿಎಫ್:** ಮಗನ ಸಾವಿನ ಸುದ್ದಿ ಕೇಳಿದ ತಾಯಿ ಕೂಡ ಮೃತಪಟ್ಟ ಪ್ರಕರಣ ಮಂಗಳ ವಾರ ಕೋರಮಂಡಲದ ವಾಚ್‌ಮನ್‌ಲೈನಿನಲ್ಲಿ ನಡೆದಿದೆ.

ಬಡಾವಣೆಯ ಕುಮಾರ್ (40) ಎಂಬುವರು ಅಸೌಖ್ಯದಿಂದ ಮುಂಜಾನೆ ನಿಧನ ಹೊಂದಿದರು. ಮಗನ ಮೇಲೆ ಅತಿ ಹೆಚ್ಚು ಪ್ರೀತಿ ಹೊಂದಿದ್ದ ತಾಯಿ ಲಲಿತಮ್ಮ (62) ಮಗನ ಶವವನ್ನು ನೋಡಿ ದುಃಖಿತರಾದರು. ನೋವನ್ನು ತಾಳಲಾರದೆ ಸ್ವಲ್ಪ ಹೊತ್ತಿನಲ್ಲಿಯೇ ಕುಸಿದು ಅವರು ಸಹ ಮೃತಪಟ್ಟರು.

ತಾಯಿ ಮಗನ ಸಾವಿನ ಪ್ರಕರಣ ಬಡಾವಣೆಯ ಜನರನ್ನು ದುಃಖದ ಮಡುವಿನಲ್ಲಿ ದೂಡಿತು.

**ಹಣ ಕಸಿದು ಪರಾರಿ**

ಹೋಟೆಲ್ ಮಾಲೀಕನ ಮೇಲೆ ಹಲ್ಲೆ ನಡೆಸಿ ₹ 29,500 ದೋಚಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಬೇತಮಂಗಲ ಪೊಲೀಸರು ಪ್ರಕರಣ ದಾಖಲು ಮಾಡಿದ್ದಾರೆ.

ಬೇತಮಂಗಲದ ಹೋಟೆಲ್ ಮಾಲೀಕ ವೆಂಕಟಸ್ವಾಮಿ ಮೇಲೆ ಡಿ.23 ರಂದು ರಾತ್ರಿ ಹಲ್ಲೆ ನಡೆಸಿದ ಆರೋಪಿಗಳಾದ ಸುರೇಶ್, ಮುನಿರಾಜು ಮತ್ತು ಶರ್ಮ ಹಣ ಕಿತ್ತುಕೊಂಡು ಹೋಗಿದ್ದರು. ತನಿಖೆ ನಡೆದಿದೆ.








